July 21, 2020

BSE Limited
P.J. Towers
Dalal Street
Mumbai 400 001
(Atten:DCS Listing)

National Stock Exchange of India Limited
Exchange Plaza, 5th Floor
Plot No. C/1, G Block
Bandra-Kurla Complex, Bandra (E)
Mumbai 400 051
(Atten:Manager Listing Department)

Dear Sirs

Subject: Submission of copy of Newspaper advertisement of the Notice of 1st Annual General Meeting

Ref : BSE Scrip: 543187 (POWERINDIA) NSE Symbol: POWERINDIA

With reference to the 1st Annual General Meeting of the Company scheduled to be held on Thursday, August 13, 2020 at 11:00 am IST through Video Conferencing / Other Audio-Visual Means, the Company has published the newspaper advertisement in the following newspapers:

1. English daily – Financial Express dated July 21, 2020
2. Local language Kannada daily – Vijaya Karnataka dated July 21, 2020

Copies of the advertisement of the aforesaid publication are attached herewith for the information of the Stock Exchanges.

You are requested to take the same on your record.

Thanking you.
Yours faithfully,
For ABB Power Products and Systems India Limited

AMMATANDA CHINNAPPA POOVANNA
Digitally signed by AMMATANDA CHINNAPPA POOVANNA
Date: 2020.07.21 10:07:22 +05'30'

Poovanna Ammatanda
General Counsel and Company Secretary

Encl:As above

Nippon Life India Asset Management Limited

(Formerly known as Reliance Nippon Life Asset Management Limited)
(CIN - L65910MH1995PLC220793)

Registered Office: 4th Floor, Tower A, Peninsula Business Park, Ganapatrao Kadam Marg, Lower Parel (W), Mumbai - 400 013.
Tel No. +91 022 6808 7000 • Fax No. +91 022 6808 7097
Email: investorrelation@nipponindiamf.com
Website: www.nipponindiamf.com

NOTICE

NOTICE, pursuant to Regulation 47 read with Regulation 29 of the Securities and Exchange Board of India (Listing Obligations and Disclosure Requirements) Regulations, 2015, is hereby given that the meeting of the Board of Directors of the Company is scheduled to be held on Monday, July 27, 2020, *inter alia*, to consider and approve the unaudited financial results of the Company for the quarter ended June 30, 2020.

This information is also available on the website of the company i.e. www.nipponindiamf.com and also available on the website of BSE Ltd. at www.bseindia.com and National Stock Exchange of India Ltd. at www.nseindia.com

For **Nippon Life India Asset Management Limited**
(formerly known as Reliance Nippon Life Asset Management Limited)
Nilufer Shekhawat
Company Secretary & Compliance Officer

Date: July 20, 2020
Place: Mumbai

JK ENVIRO-TECH LIMITED

CIN: U73100GJ2007PLC075963
Regd. Office: P.O. Central Pulp Mills– 394660, Fort Songadh, Dist. Tapi, Gujarat
Admn. Office: Nehru House, 4 Bahadur Shah Zafar Marg, New Delhi-110 002
Phone: 011-33001132, 23311112-5, Fax: 011-23712680
Email ID: csjketl@jkmail.com

NOTICE OF POSTAL BALLOT

1. Notice is hereby given that JK Enviro-Tech Limited (JKETL) has by 20th July 2020, completed the dispatch of notice of postal ballot along with the Postal Ballot Form and other documents accompanying the same for seeking the approval of the Members of JKETL in respect of business mentioned in the Postal Ballot Notice dated 17th July 2020, through Postal Ballot. This is in accordance with the provisions of Section 110 and other applicable provisions, if any, of the Companies Act, 2013 ("the Act") read with the Companies (Management and Administration) Rules, 2014 including any statutory modification(s) or re-enactments thereof for the time being in force.
2. The Notice is being sent to all the Members /Beneficiaries, whose names appear in the Register of Members/Record of Depositories as on 16th July 2020. A person who is not a Member on the cut-off date should accordingly treat the Postal Ballot Notice as for information purposes only.
3. The voting period for Postal Ballot begins on 21st July 2020 from 10.00 A.M. and ends on 19th August 2020 at 5.00 P.M. The Company has appointed Shri Namo Narain Agarwal, Company Secretary in whole-time practice, as scrutinizer for conducting the entire Postal Ballot process in a fair and transparent manner. Duly completed and signed Postal Ballot Form(s) should reach the scrutinizer by 5.00 P.M. on or before 19th August 2020. All votes received from members after the said date will be treated invalid and voting by postal ballot shall not be allowed beyond the said date i.e. 19th August 2020. A member, who has not received Postal Ballot Form may request for a duplicate Postal Ballot Form, if so required, by sending a request to the Company Secretary, JK Enviro-Tech Limited, Secretarial Department, Gulab Bhawan, (Rear Block - 3rd Floor), 6A, Bahadur Shah Zafar Marg, New Delhi-110002 or send email at **csjketl@jkmail.com.**
4. In case any member has any query/grievance connected with the voting by postal ballot, he/she may contact the Company Secretary of the Company as mentioned above.
5. The Results of the Postal Ballot will be declared soon after the scrutinizer submits his report after the last date of receipt of postal ballots but not later than seven days thereof. The Results declared along with the Scrutinizer's Report shall be placed on the Notice Board of the Company at Registered Office and Administrative Office.

By order of the Board
For JK Enviro-Tech Limited
Sd/-
Pooja Gurwala
Company Secretary

Place : New Delhi
Date :20th July, 2020

CAMLIN FINE SCIENCES LIMITED

Camlin Fine Sciences

CIN-L74100MH1993PLC075361
Regd. off.: Plot No. F/11 & F/12, WICEL, Opp. SEEPZ Main Gate, Central Road, Andheri (East), Mumbai - 400 093. **Tel:** 91-22-6700 1000; **Fax:** 91-22-2832 4404
Email:secretarial@camlinfs.com; **Website:**www.camlinfs.com

NOTICE OF 27TH ANNUAL GENERAL MEETING, REMOTE E-VOTING AND BOOK CLOSURE

NOTICE is hereby given that the 27th Annual General Meeting of the members of Camlin Fine Sciences Limited, will be held on Monday, August 10, 2020 at 3.00 p.m. IST through Video Conferencing ("VC") / Other Audio Visual Means ("OAVM").

Documents referred to in the AGM Notice will be available for inspection by Members of the Company at the Registered Office of the Company between 10.00 a.m. and 5.00 p.m. on all working days except Saturdays, upto the date of the AGM.

Notice is hereby given that all the businesses set out in the Notice of the AGM dated June 25, 2020 pursuant to Section 108 of the Act read with Rule 20 of the Companies (Management and Administration) Amendment Rules, 2015 and Regulation 44 of the SEBI (Listing Obligations and Disclosure Requirements) Regulations, 2015, the Company is pleased to provide to its Members facility to exercise their right to vote through electronic voting services provided by National Securities Depository Limited (NSDL).

The AGM Notice inter alia indicating the process and manner of e-Voting process is available on https://www.evoting.nsdl.com or https://www.camlinfs.com or the same can be obtained by sending a request at evoting@nsdl.co.in or secretarial@camlinfs.com or rnt.helpdesk@linkintime.co.in or at the registered office of the Company.

The remote e-voting period begins on Friday, August 7, 2020 at 09:00 A.M. and ends on Sunday, August 9, 2020 at 05:00 P.M. The remote e-voting module shall be disabled by NSDL for voting thereafter.

Only those Members/ shareholders, who will be present in the AGM through VC/OAVM facility and have not casted their vote on the Resolutions through remote e-Voting and are otherwise not barred from doing so, shall be eligible to vote through e-Voting system in the AGM.

Members who have voted through Remote e-Voting will be eligible to attend the AGM. However, they will not be eligible to vote at the AGM.

The voting rights of members shall be in proportion to their shares of the paid-up equity share capital of the Company as on the cut-off date of Friday, August 7, 2020. Any person, who acquires shares of the Company and becomes member of the Company after July 18, 2020 i.e. the date considered for dispatch of AGM Notice and holding shares as of the cut-off date i.e. August 7, 2020, may refer to instructions for e-voting as set out in the Notice of the AGM to cast their votes or may send a request at evoting@nsdl.co.in.

In case of any queries, Members may refer to the Frequently Asked Questions (FAQs) for members and e-voting user manual for members available at the Downloads sections of https://www.evoting.nsdl.com or contact Ms. Soni Singh, Assistant Manager, National Securities Depository Limited, 4th Floor, 'A' Wing, Trade World, Kamala Mills Compound, Senapati Bapat Marg, Lower Parel, Mumbai 400 013 or at toll free no.: 1800-222-990 or email: evoting@nsdl.co.in.

Further, Notice is hereby given pursuant to Section 91 of the Act read with Rule 10(1) of the Companies (Management and Administration) Rules, 2014 and Regulation 42 of the SEBI (Listing Obligations and Disclosure Requirements) Regulations, 2015, that the Register of Members and the Share Transfer Books of the Company will remain closed from Tuesday, August 4, 2020 to Monday, August 10, 2020 (both days inclusive) for annual closing.

For **Camlin Fine Sciences Limited**
(Mandar Godbole)
GM Legal & Company Secretary

Mumbai
July 20, 2020

MAHARASHTRA SCOOTERS LIMITED

CIN: L35912MH1975PLC018376
Regd.Office: C/o.Bajaj Auto Ltd., Mumbai–Pune Road, Akurdi,Pune – 411035.
Phone: 020-66107150 Website: www.mahascooters.com E-mail: investors_msl@bajajauto.co.in

Extract of unaudited financial results for the quarter ended 30 June 2020

(₹ In Lakh)

	Particulars	Quarter ended		Year ended
		30.06.2020	30.06.2019	31.03.2020
		(Reviewed)	(Reviewed)	(Audited)
1	Revenue from operations	141	140	1538
2	Net profit for the period before tax	159	172	19180
3	Net profit for the period after tax	145	169	17994
4	Total comprehensive income, net of tax	209842	159536	(299809)
5	Paid-up equity share Capital	1143	1143	1143
6	Other Equity as shown in the Audited Balance Sheet of the year			819935
7	Basic and diluted earnings per share (₹) (not annualised) (Face value of ₹ 10 each)	1.27	1.48	157.45

Note: The above is an extract of the unaudited financial results for the quarter ended 30 June 2020 which have been reviewed by the Audit Committee and approved by Board of Directors at its meeting held on 20 July 2020 and filed with the stock exchanges under Regulation 33 of SEBI (Listing Obligations and Disclosure Requirements) Regulations, 2015, as amended. The full format of the aforesaid financial results is available on the website of the Company, BSE Limited and National Stock Exchange of India Limited i.e. www.mahascooters.com, www.bseindia.com and www.nseindia.com respectively.

By order of the Board of Directors
For Maharashtra Scooters Limited
Sanjiv Bajaj
Chairman

Pune
20 July 2020

HITACHI ABB

ABB POWER PRODUCTS AND SYSTEMS INDIA LIMITED

CIN: U31904KA2019PLC121597
Registered Office: 8th Floor, Brigade Opus, 70/401, Kodigehalli Main Road, Bengaluru-560 092
Website: https://www.hitachiabb-powergrids.com/in/en; Email: in-investorhelpdesk_appsil@abb.com;
Phone no:+91 80 2204 1800

NOTICE OF THE 1ST ANNUAL GENERAL MEETING, BOOK CLOSURE AND REMOTE E-VOTING INFORMATION

(A) ANNUAL GENERAL MEETING AND BOOK CLOSURE:

Notice is hereby given that the 1st Annual General Meeting (AGM) of the members of the Company will be held on Thursday, August 13, 2020 at 11.00 A.M. (IST) through Video Conferencing ("VC") / Other Audio Visual Means ("OAVM"), to transact the businesses set forth in the AGM notice dated July 20, 2020. Pursuant to Circulars issued by the Ministry of Corporate Affairs and Securities and Exchange Board of India, which allow the Companies to hold AGM through VC/OAVM, the 1st AGM of the Company is being held through VC/OAVM.

In terms of the said Circulars, the AGM Notice along with the Audited Balance Sheet as at December 31, 2019, Audited Profit & Loss, Cash Flow Statement for the financial period ended December 31, 2019, together with the Reports of the Directors and Auditors thereon will be sent to the Members whose E-mail IDs are registered with the Company/Depository Participant(s)/ KFin Technologies Private Limited, (KFintech), the Registrar and Share Transfer Agents of the Company. The AGM notice and Annual Report will be uploaded in the Company's website at https://www.hitachiabb-powergrids.com/in/en/about-us/investor-relations/financial-results--reports--and-presentations.The AGM Notice and Annual Report will also be available on the websites of the Stock Exchanges where the shares of the Company have been listed viz., BSE Limited - www.bseindia.com and National Stock Exchange of India Limited - www.nseindia.com. Members including Members who have not registered their E-mail addresses with Company/Depository Participant(s), can download the AGM Notice and Annual Report from any of the said websites.

The Members whose E-mail address is not registered with the KFintech/ Depository Participant(s), are required to visit the link: https://ris.kfintech.com/email_registration/ for registration of E-mail address and to receive AGM Notice, Annual Report and e-voting user ID and password by E-mail from KFintech. For detailed procedure for registering the E-mail address and for receipt of e-voting user ID and password and the manner of voting remotely or e-voting during the AGM, the Members are requested to refer the AGM Notice available on the aforesaid websites. The Members are requested to refer the AGM notice for instructions for attending the AGM through VC / OAVM and viewing webcast of AGM. The AGM related documents will be available for electronic inspection by the Members of the Company during office hours on any working day of the Company upto the date of AGM.

Notice is also given pursuant to Section 91 of the Companies Act, 2013 and Regulation 42 of the SEBI (Listing Obligations and Disclosure Requirements) Regulations, 2015 (Listing Regulations) that the Register of Members and Share Transfer Books of the Company will be closed from August 7, 2020 to August 13, 2020 (both days inclusive) for the purpose of AGM.

(B) REMOTE E-VOTING:

In compliance with the provisions of Section 108 of the Companies Act, 2013 and Rule 20 of the Companies (Management and Administration) Rules, 2014 as amended from time to time and the provisions of Regulation 44 of the Listing Regulations, the Members are provided with the facility to cast their vote electronically, through the e-voting services provided by KFin Technologies Private Limited, (KFintech) on all resolutions set forth in the AGM notice. The businesses to be transacted through voting by electronic means are given below:

As Ordinary Business:

1. Adoption of Financial Statements and Reports of the Board of Directors and the Auditors thereon for the financial period ended December 31, 2019
2. Appointment of a Director
3. Appointment of Statutory Auditors for a term of 5 years

Sl No	Details / Activity	Particulars
1.	Date and time of commencement and end of remote e-voting	Commencement: at 9.00 a.m. on Monday, August 10, 2020 Conclusion:at 5.00 p.m. on Wednesday, August 12, 2020
2.	Cut-off date	Thursday, August 6, 2020

The remote e-voting module shall be disabled for voting after 5.00 pm on Wednesday, August 12, 2020. Once the vote on a resolution is cast by the Member, he / she / it shall not be allowed to change it subsequently. The Members who have not cast their vote electronically, and are otherwise not barred from doing so, can exercise their voting rights through the e-voting system during the AGM. The Company will make necessary arrangements for e-voting during the AGM. Members who have cast their votes by remote e-voting prior to the meeting may also attend the AGM but they are not entitled to cast their vote again during the AGM. Members whose name is recorded in the Register of Members or in the register of beneficial owners maintained by the depositories as on the cut-off date i.e. Thursday, August 6, 2020, only shall be entitled to avail the facility of remote e-voting / e-voting during the AGM as the case may be.

Webcast facility: Members may kindly note that, the Company will provide webcast of the proceedings of AGM. Members who are entitled to participate in the AGM, can view the proceedings of AGM by logging into website of KFintech at https: //emeetings.kfintech.com/ using their e-voting login credentials.

For any query / clarification / grievance connected with VC Meeting, remote e-voting and Members who acquired shares of the Company after the date of dispatch of AGM notice and hold shares as of the cut-off date i.e. Thursday, August 6, 2020 may approach Ms. C Shobha Anand, Deputy General Manager, KFin Technologies Private Limited on Tel +91 40 6716 2222 or Toll Free No.: 1800-345-4001 or write E-mail at shobha.anand@kfintech.com, with their particulars viz., DP id Client id / Folio No. to provide login id and password for remote e-voting or may write an E-mail to the Company at in-investorhelpdesk_appsil@abb.com.

By Order of the Board of Directors

For ABB Power Products and Systems India Limited

Poovanna Ammatanda
General Counsel & Company Secretary
FCS-4741

Bengaluru, July 20, 2020

BGR ENERGY SYSTEMS LIMITED

BGR ENERGY www.bgrcorp.com

Regd. Off: A-5, Pannamgadu Industrial Estate, Ramapuram Post, Sullurpet Taluk, Nellore District, Andhra Pradesh - 524 401.
Corp. Off: 443, Anna Salai, Teynampet, Chennai - 600 018
Ph: +91-44-24301000, Fax: +91-44-24364656
Corporate Identity Number: L40106AP1985PLC005318
Email: investors@bgrenergy.comwebsite: www.bgrcorp.com

NOTICE

Notice is hereby given to the Shareholders of the Company pursuant to the provisions of Section 124(6) of the Companies Act, 2013 read with Rule 6 of the Investor Education and Protection Fund Authority (Accounting, Audit, Transfer and Refund) Rules, 2016, as amended from time to time, that all the Shares in respect of which dividend entitlements have remained unclaimed / unpaid during last seven consecutive years, are required to be transferred to the Investor Education and Protection Fund ("IEPF") established by the Central Government.

The list of shareholders, who have not encashed their dividend warrants during last seven years from 2012-13 (base year) and whose shares are therefore liable for transfer to the DEMAT Account of the IEPF Authority, is displayed on our website www.bgrcorp.com. Individual notices are being sent through speed post to the latest available addresses of those shareholders who have not claimed their dividends from the year 2012-13 advising them to contact us or our Registrar and Share Transfer Agent, M/s. Link Intime India Private Limited, C-101, 247 Park LBS Marg, Vikhroli (West), Mumbai – 400083, Telephone No.(022)49186000, email: iepf.shares@linkintime.co.inon or before September 18, 2020 for further details and for making a valid claim for the unclaimed dividends. In case no valid claim is made on or before September 18, 2020, the shares in respect of such unclaimed dividends will be transferred to the DEMAT Account of the IEPF Authority as per the Rules.

In case the concerned shareholders wish to claim the shares after transfer to IEPF, a separate application has to be made to the IEPF Authority in Form IEPF-5, as prescribed under the rules and the same is available at IEPF website i.e., www.iepf.gov.in.

for **BGR Energy Systems Limited**
R. Ramesh Kumar
Director & Secretary

Place : Chennai
Date : July 20, 2020

CREDITACCESS GRAMEEN LIMITED

CreditAccess™ Grameen

New No.49 (Old No.725), 46th Cross, 8th Block, Jayanagar
(Next to Rajalakshmi Kalyana Mantap), Bengaluru – 560 070.
Tel: +91 80 2263 7300 | **Fax:** +91 80 2664 3433
Email: csinvestors@creditaccessgrameen.com; **Website:** www.creditaccessgrameen.com
CIN: L51213KA1991PLC053423

NOTICE OF THE 29TH ANNUAL GENERAL MEETING AND E-VOTING INFORMATION

Notice is hereby given that:

1. The 29th Annual General Meeting (AGM) of the members of CreditAccess Grameen Limited (the "Company") will be held on Tuesday, August 11, 2020 at 3:00 p.m. IST through Video Conferencing / Other Audio-Visual Means ("VC"). In compliance with General Circular numbers 20/2020, 14/2020, 17/2020 issued by the Ministry of Corporate Affairs (MCA) and Circular No. SEBI/HO/CFD/CMD1/CIR/P/2020/79 issued by the Securities and Exchange Board of India (herein after collectively referred to as 'Circulars'), Companies are allowed to hold AGMs through VC, without the physical presence of members at a common venue. Hence, the AGM of the Company is being held through VC to transact the business as set forth in the Notice of the AGM dated June 16, 2020.
2. In compliance with the Circulars, electronic copies of the Notice of the AGM and Annual Report for 2019-2020 have been sent to all the members whose email IDs are registered with the Company/Depository Participants/Registrar & Share Transfer Agents. These documents are also available on the website of the Company at, https://www.creditaccessgrameen.com. stock exchange websites www.bseindia.com and www.nseindia.com and on the website of KFin Technologies Pvt. Ltd., the Company's Registrar & Share Transfer Agents (RTA) at https://evoting.karvy.com/. The dispatch of Notice of the AGM through emails has been completed on July 20, 2020.
3. Members holding shares in dematerialized form, as on the cut-off date (August 4, 2020), may cast their votes electronically on the business as set forth in the Notice of the AGM through the electronic voting system of RTA (remoting e-voting'). Members are hereby informed that:
   i) The business as set forth in the Notice of the AGM may be transacted through remote e-voting or e-voting system at the AGM;
   ii) The remote e-voting shall commence on Saturday, August 8, 2020 (9:00 a.m. IST);
   iii) The remote e-voting shall end on Monday, August 10, 2020 (5:00 p.m. IST);
   iv) The cut-off date for determining the eligibility to vote by remote e-voting or by e-voting system at the AGM shall be Tuesday, August 4, 2020;
   v) Remote e-voting module will be disabled after 5:00 p.m. IST on August 10, 2020;
   vi) Any person, who acquires shares of the Company and becomes a member post-dispatch of the Notice of the AGM and holds shares as on the cut-off date i.e. August 4, 2020, may obtain the login ID and password by sending a request at einward.ris@kfintech.com. However, if a member is already registered with RTA for e-voting then the existing user ID and password can be used for casting their vote;
   vii) Members may note that: a) The remote e-voting module shall be disabled by RTA beyond 5:00 p.m. IST on August 10, 2020 and once the votes on a resolution is cast by a member, the member shall not be allowed to change it subsequently; b) The facility for e-voting will also be made available during the AGM, and those members present in the AGM through VC facility, who have not cast their vote on the resolutions through remote e-voting and are otherwise not barred from doing so, shall be eligible to vote through the e-voting system at the AGM. c) The members who have cast their votes by remote e-voting prior to the AGM may also attend the AGM but shall not be entitled to cast their votes again; and d) Only persons whose name is recorded in the register of members or in the register of beneficial owners maintained by the depositories as on the cut-off date shall be entitled to avail the facility of remote e-voting or e-voting at the AGM.
   viii) The manner of voting remotely for members holding shares in dematerialized mode and for members who have not registered their email addresses is provided in the Notice of the AGM. The details will also be made available on the website of the Company www.creditaccessgrameen.com
   ix) Shareholders who have not registered their email address and in consequence the Annual Report, Notice of e-AGM could not be serviced, may temporarily get their email address and mobile number registered with the Company's RTA, by following the instructions provided at https://ris.kfintech.com/email_registration/. In case of any queries, shareholder may write to einward.ris@kfintech.com.
   x) Shareholders may also visit the website of the Company www.creditaccessgrameen.com or the website of the RTA https://evoting.karvy.com/ for downloading the Annual Report and Notice of the e-AGM.
   xi) Alternatively members may send an e-mail request at the email id einward.ris@kfintech.com along with a scanned copy of the signed request letter providing the email address, mobile number, self-attested PAN copy and Client Master copy for sending the Annual report, Notice of e-AGM and the remote e-voting instructions.

By Order of the Board of Directors
for **CreditAccess Grameen Limited**
Sd/-
M.J. Mahadev Prakash
Head – Compliance, Legal & Company Secretary

Place: Bengaluru
Date: July 20, 2020

ಹಾಪ್‌ಕಾಮ್ಸ್ ಮಳಿಗೆಗಳ ವ್ಯಾಪಾರಕ್ಕೆ ಹೊಡೆತ

ಬೆಂಗಳೂರು: ಲಾಕ್‌ಡೌನ್‌ನಿಂದಾಗಿ ಹಾಪ್‌ಕಾಮ್ಸ್ ಮಳಿಗೆಗಳಿಗೆ ಬೆಳಗ್ಗೆ 6 ರಿಂದ ಮಧ್ಯಾಹ್ನ 12 ರವರೆಗೆ ಮಾತ್ರ ಮಾರಾಟಕ್ಕೆ ಅವಕಾಶ ನೀಡಲಾಗಿದೆ. ಹೀಗಾಗಿ, ರೈತರು ತಂದ ಮಾಲು ಮಾರಾಟವಾಗದೆ ಉಳಿಯುತ್ತಿದ್ದು, ಹಾಪ್‌ಕಾಮ್ಸ್‌ಗೆ ತಲೆನೋವಾಗಿ ಪರಿಣಮಿಸಿದೆ.

''ಲಾಕ್‌ಡೌನ್‌ಗೂ ಮುನ್ನ ಕಳೆದ ಸೋಮವಾರ 89 ಟನ್ ಹಣ್ಣು, ತರಕಾರಿ ಮಾರಾಟವಾಗಿತ್ತು. ಮಂಗಳವಾರ 80 ಟನ್ ಮಾರಾಟವಾಯಿತು. ಆದರೆ, ಲಾಕ್‌ಡೌನ್ ಜಾರಿಯಾದ ಬುಧವಾರ 66 ಟನ್‌ಗೆ ಇಳಿಯಿತು. ಗುರುವಾರ ಮತ್ತು ಶುಕ್ರವಾರ ಈ ಪ್ರಮಾಣ ಮೂರನೇ ಒಂದು ಭಾಗಕ್ಕೆ ಇಳಿದಿದ್ದು, ಕೇವಲ 27 ಟನ್ ಹಣ್ಣು ಮತ್ತು ತರಕಾರಿ ಮಾತ್ರ ಮಾರಾಟವಾಗಿದೆ'' ಎಂದು ಹಾಪ್‌ಕಾಮ್ಸ್ ಅಧ್ಯಕ್ಷ ಎ.ಎಸ್. ಚಂದ್ರೇಗೌಡ ಹೇಳಿದರು.

ವಿಜಯ ಕರ್ನಾಟಕ ವಿಕ English ಕಲಿ ಭಾಗ-273

ಪಿ.ಆರ್. ಆಚಾರ್ಯ, ✆8431867899, www.pracharya.in

ಪ್ರಿಯರೆ,

ನಿನ್ನೆಯ ವಾಕ್ಯಗಳ ಅನುವಾದ

1. Did you tell her that I was calling her?
2. Don't tell anybody that I am here.
3. Didn't you say that I wouldn't come?
4. Raju said that he was there.
5. I didn't know that he knew English.

ಮೇಲಿನ ವಾಕ್ಯಗಳಲ್ಲಿ ಕೆಲವು ಪ್ರಶ್ನೆಗಳಿವೆ. ಇವುಗಳಿಗೆ ಹೇಗೆ ಉತ್ತರಿಸುವುದೆಂದು ನೋಡಿ.

1. Don't you know that my house is here?
ಇಲ್ಲ, ನಿಮ್ಮ ಮನೆ ಇಲ್ಲಿದೆ ಅಂತ ನನಗೆ ಗೊತ್ತಿಲ್ಲ. No. I don't know that your house is here.
ನಿಮ್ಮ ಮನೆ ಇಲ್ಲಿದೆ ಅಂತ ನನಗೆ ಗೊತ್ತು. I know that your house is here.
2. Did he say that the computer was new?
ಹೌದು. ಕಂಪ್ಯೂಟರ್ ಹೊಸದೆಂದು ಅವನು ಹೇಳಿದ. He said that the computer was new.
3. Don't tell anybody that I am here.
ಆಗಲಿ ಸರ್. ನೀವು ಇಲ್ಲಿದ್ದೀರಿ ಎಂದು ನಾನು ಯಾರಿಗೂ ಹೇಳುವುದಿಲ್ಲ. Okay Sir. I won't tell anybody that you are here.
4. Did you tell her that I was calling her?
ಹೌದು ಮೇಡಂ, ನೀವು ಕರೆಯುತ್ತಿದ್ದೀರೆಂದು ನಾನು ಅವಳಿಗೆ ಹೇಳಿದೆ. Yes Madam. I told her that you were calling her.

(ಮುಂದುವರಿಯುವುದು)

ನ್ಯಾಯಬೆಲೆ ಅಂಗಡಿಗಳ ಮುಂದೆ ಸರತಿ ಸಾಲು

ಪಡಿತರ ವಿತರಣೆಗೆ ಲಾಕ್‌ಡೌನ್ ಅಡ್ಡಿ

▪ **ಆರ್.ತುಳಸಿಕುಮಾರ್** ಬೆಂಗಳೂರು
tulasi.kumar@timesgroup.com

ವಿಕ ವಿಶೇಷ

ಲಾಕ್‌ಡೌನ್‌ನಿಂದಾಗಿ ಪಡಿತರ ವಿತರಣೆಗೆ ಅಡ್ಡಿ ಎದುರಾಗಿದೆ. ಸೀಮಿತ ಅವಧಿಗೆ ಮಾತ್ರ ನ್ಯಾಯ ಬೆಲೆ ಅಂಗಡಿಗಳು ತೆರೆಯಬೇಕೆಂಬ ನಿಯಮದಿಂದಾಗಿ ಅದೇ ದಿನ ಪಡಿತರ ಸಿಗುವುದು ಖಾತರಿ ಇಲ್ಲ.

ಲಾಕ್‌ಡೌನ್ ಹಿನ್ನೆಲೆಯಲ್ಲಿ ನ್ಯಾಯ ಬೆಲೆ ಅಂಗಡಿಗಳು ಬೆ.8ರಿಂದ ಮ.12 ರವರೆಗೆ ಮಾತ್ರ ಕಾರ್ಯನಿರ್ವಹಿಸುತ್ತವೆ. ಇದರಿಂದಾಗಿ ಜನರು ಉದ್ದನೆಯ ಸಾಲಿನಲ್ಲಿ ನಿಂತು ಪಡಿತರ ಧಾನ್ಯಗಳನ್ನು ಪಡೆಯುವುದು ಅನಿವಾರ್ಯವಾಗಿದೆ. ಈ ತಿಂಗಳ ಪಡಿತರ ಜು.10ರಿಂದ ವಿತರಣೆಯಾಗುತ್ತಿದೆ. ಕೇಂದ್ರ ಸರಕಾರದ ಪಾಲಿನ ಆಹಾರಧಾನ್ಯ ತಡವಾಗಿ ರಾಜ್ಯದ ಕೈಸೇರಿದ ಕಾರಣ ಒಟ್ಟಾರೆ ವಿತರಣೆ ನಿಧಾನವಾಗಿದೆ.

ಒಟಿಪಿ ಬಾರದೆ ಸಮಸ್ಯೆ ಸೃಷ್ಟಿ: ನ್ಯಾಯಬೆಲೆ ಅಂಗಡಿಗಳಲ್ಲಿ ಕಾರ್ಡ್‌ದಾರರು ಪಡಿತರ ಪಡೆಯುವ ವೇಳೆ ಮೊಬೈಲ್ ಸಂಖ್ಯೆಗೆ ಸಂದೇಶ ಬರುವ ಒಟಿಪಿ ಸಂಖ್ಯೆಯನ್ನು ನೀಡಬೇಕು. ಕೆಲ ಪ್ರದೇಶಗಳಲ್ಲಿ ಒಟಿಪಿ ಸಂಖ್ಯೆ ತಕ್ಷಣವೇ ಬರುತ್ತಿಲ್ಲ. ಸರ್ವರ್ ಸಮಸ್ಯೆಯಿಂದಾಗಿ ಈ ಸ್ಥಿತಿ ನಿರ್ಮಾಣವಾಗಿ ಸಾಲಲ್ಲಿ ನಿಂತ ಇತರ ಕಾರ್ಡ್‌ದಾರರು ಕಾಯುವುದು ಅನಿವಾರ್ಯವಾಗಿದೆ.

ಒಟಿಪಿ ಸಂಖ್ಯೆ ಬಾರದೆ ಕಾರ್ಡ್ ದಾರರಿಗೆ ಸಮಸ್ಯೆ

ಕೇಂದ್ರದಿಂದ ಬಾರದ ಕಡಲೆ

ಇತ್ತೀಚೆಗೆ ಪ್ರಧಾನಿ ಮೋದಿಯವರು ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿದ್ದ ವೇಳೆ ಜುಲೈನಿಂದ ನವೆಂಬರ್‌ವರೆಗೆ ಕಾರ್ಡ್‌ದಾರರಿಗೆ ಮಾಸಿಕ ತಲಾ ಒಂದು ಕೆ.ಜಿ. ಕಡಲೆಕಾಳು ವಿತರಿಸುವ ಘೋಷಣೆ ಮಾಡಿದ್ದರು. ಆತ್ಮನಿರ್ಭರ ಯೋಜನೆಯಡಿ ವಿತರಿಸಬೇಕಿದ್ದ ಕಡಲೆಕಾಳು ರಾಜ್ಯಕ್ಕೆ ಪೂರ್ಣ ಪ್ರಮಾಣದಲ್ಲಿ ಬಂದಿಲ್ಲ. ಹೀಗಾಗಿ ಈ ತಿಂಗಳ ಕೋಟಾಗೆ ಕತ್ತರಿ ಬಿದ್ದಿದೆ.

ಕೋವಿಡ್-19 ಸೋಂಕು ಕಾಣಿಸಿಕೊಂಡ ಬಳಿಕ ಮಾರ್ಚ್ ತಿಂಗಳಿನಿಂದ ಕಾರ್ಡ್‌ದಾರರು ಬೆರಳಿನ ಗುರುತು ನೀಡುವುದನ್ನು ನಿರ್ಬಂಧಿಸಲಾಗಿದೆ. ಆದರೆ, ಕಳೆದ ತಿಂಗಳಿನಿಂದ ಎಲ್ಲಾ ಕಾರ್ಡ್‌ದಾರರಿಗೂ ಪಡಿತರ ವಿತರಣೆ ಕಡ್ಡಾಯ ಮಾಡಿರುವುದರಿಂದ ಒಟಿಪಿ ಸಂಖ್ಯೆ ಸಿಗದವರಿಂದ ಬೆರಳಚ್ಚು ಪಡೆಯಲಾಗುತ್ತಿದೆ.

ಪಿಪಿಇ ಕಿಟ್ ಧರಿಸಿ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡ ಶಾಸಕ ಸತೀಶ್ ರೆಡ್ಡಿ

ಬೊಮ್ಮನಹಳ್ಳಿ: ಸ್ಥಳೀಯ ಶಾಸಕ ಎಂ. ಸತೀಶ್ ರೆಡ್ಡಿಯವರು ಪಿಪಿಇ ಕಿಟ್ ಧರಿಸಿ ಸ್ಥಳೀಯ ಬಿಜೆಪಿ ಮುಖಂಡರೊಬ್ಬರ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡರು.

ಗಾರೆಬಾವಿಪಾಳ್ಯದ ಹಿರಿಯ ಬಿಜೆಪಿ ಮುಖಂಡ ಶ್ರೀನಿವಾಸರೆಡ್ಡಿ ಕೊರೊನಾದಿಂದ ಮೃತಪಟ್ಟಿದ್ದು, ನಗರದ ಬನಶಂಕರಿ ಚಿತಾಗಾರದಲ್ಲಿ ಸೋಮವಾರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ''ಶ್ರೀನಿವಾಸ ರೆಡ್ಡಿಯವರು ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದರು. ಪಕ್ಷದ ಪರವಾಗಿ ಅವರಿಗೆ ಅಂತಿಮ ನಮನ ಸಲ್ಲಿಸಿದ್ದೇನೆ,'' ಎಂದು ಸತೀಶ ರೆಡ್ಡಿ ಹೇಳಿದರು.

ಅಂತ್ಯಕ್ರಿಯೆಗೂ ಹೆಣಗಾಟ!

» ನಮ್ಮ ಮೊದಲ ಪುಟದಿಂದ

ಅಂತ್ಯಕ್ರಿಯೆ ಮುಗಿಸಲು 1 ತಾಸು: ''ಪ್ರತಿಯೊಂದು ಮೃತದೇಹಗಳನ್ನು ಸುಡಲು ಒಂದು ತಾಸು ಸಮಯ ಬೇಕಿದೆ. ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆಗೆ ಒಂದೂವರೆ ಗಂಟೆ ಹಿಡಿಯುತ್ತಿದೆ. ಹೀಗಾಗಿ, ಅಂತ್ಯಕ್ರಿಯೆಗೆ ಎಲ್ಲೆಡೆ ಸರತಿ ಸಾಲುಗಳು ಕಂಡುಬರುತ್ತಿವೆ,'' ಎಂದು ವಿದ್ಯುತ್ ಚಿತಾಗಾರದ ಸಿಬ್ಬಂದಿಯೊಬ್ಬರು ತಿಳಿಸಿದರು.

''ಸಹಜ ಸಾವಿಗೀಡಾದವರ ಅಂತ್ಯಕ್ರಿಯೆಗೆ ಅವರ ಕುಟುಂಬ ಸದಸ್ಯರು ಸ್ಲಾಟ್ ಬುಕ್ಕಿಂಗ್ ಮಾಡಿದರೂ ನಿಗದಿತ ಸಮಯಕ್ಕೆ ಬರುತ್ತಿಲ್ಲ. ಚಿತಾಗಾರಕ್ಕೆ ಬಂದ ಬಳಿಕ ಧಾರ್ಮಿಕ ವಿಧಿವಿಧಾನ, ಪೂಜಾ ಕಾರ್ಯಗಳಿಗೆ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿದ್ದಾರೆ. ಹೀಗಾಗಿ, ಶವ ಸಂಸ್ಕಾರ ಪ್ರಕ್ರಿಯೆ ತಡವಾಗುತ್ತಿದೆ,'' ಎಂದು ಹೇಳಿದರು.

6 ದಿನಗಳ ಬಳಿಕ ಸೋಂಕಿತರು, ಸಾವಿನ ಸಂಖ್ಯೆಯಲ್ಲಿ ಇಳಿಕೆ

ಲಾಕ್‌ಡೌನ್ ಎಫೆಕ್ಟ್‌ನಿಂದ ತುಸು ತಗ್ಗಿದ ಕೊರೊನಾ

▪ **ವಿಕ ಸುದ್ದಿಲೋಕ** ಬೆಂಗಳೂರು

ನಗರದಲ್ಲಿ ಕೊರೊನಾ ವೈರಾಣು ಸೋಂಕಿನ ಅಟ್ಟಹಾಸ ಕೊಂಚ ತಗ್ಗಿದ್ದು, ಜನರು ನಿಟ್ಟುಸಿರು ಬಿಡುವಂತಾಗಿದೆ. ಸೋಮವಾರ 1452 ಪ್ರಕರಣ ಪತ್ತೆಯಾಗಿದ್ದು, ಸೋಂಕಿಗೆ 31 ಮಂದಿ ಬಲಿಯಾಗಿದ್ದಾರೆ.

ಸೋಂಕಿತರು	ಗುಣಮುಖ
33229	6953
ಸಕ್ರಿಯ	**ಸಾವು**
25574	698

ನಗರದಲ್ಲಿ ಸೋಂಕು ನಿಯಂತ್ರಣಕ್ಕೆ ಜು. 14ರ ರಾತ್ರಿಯಿಂದ ಒಂದು ವಾರ ಕಾಲ ಲಾಕ್‌ಡೌನ್ ಹೇರಲಾಯಿತು. ಆದರೂ, ಕೊರೊನಾ ಸೋಂಕಿನ ಅಬ್ಬರ ಕಡಿಮೆಯಾಗಿರಲಿಲ್ಲ. ಲಾಕ್‌ಡೌನ್ ಘೋಷಣೆಯಾದ ಮರುದಿನವೇ ಸೋಂಕಿತರ ಸಂಖ್ಯೆಯು 1975ಕ್ಕೆ ಮುಟ್ಟಿತ್ತು. ಆನಂತರ ನಿತ್ಯ 2 ಸಾವಿರದ ಗಡಿ ದಾಟುತ್ತಲೇ ಇತ್ತು.

ಕಳೆದ ಆರು ದಿನಗಳ ಬಳಿಕ ಸೋಂಕಿತರ ಸಂಖ್ಯೆಯಲ್ಲಿ ಕೊಂಚ ಇಳಿಮುಖವಾಗಿದ್ದು, ಸಾವಿನ ಸಂಖ್ಯೆಯೂ ಕಡಿಮೆಯಾಗಿದೆ. ಜು. 22ರಿಂದ ಲಾಕ್‌ಡೌನ್ ತೆರವುಗೊಳಿಸುವ ಸಾಧ್ಯತೆಗಳಿದ್ದು, ಆನಂತರ ಸೋಂಕಿತ ಪ್ರಕರಣಗಳು ಕಡಿಮೆಯಾಗಲಿವೆಯೇ ಅಥವಾ ಜಾಸ್ತಿಯಾಗಲಿದೆಯೇ ಎಂಬುದು ತಿಳಿದುಬರಲಿದೆ.

33 ಸಾವಿರ ದಾಟಿದ ಪ್ರಕರಣ: ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ 33,229ಕ್ಕೆ ಏರಿಕೆಯಾಗಿದ್ದು, ಈವರೆಗೆ 6953 ಮಂದಿ ಗುಣಮುಖರಾಗಿದ್ದಾರೆ. ಉಳಿದ 25574 ಮಂದಿ ನಿಗದಿತ ಆಸ್ಪತ್ರೆಗಳು, ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೊರೊನಾ ಸೋಂಕಿಗೆ ಒಳಗಾಗಿ ಮೃತಪಟ್ಟವರ ಸಂಖ್ಯೆಯು 700ರ ಗಡಿ (ಒಟ್ಟು 698 ಮಂದಿ) ತಲುಪಿದೆ.

31 ಬಲಿ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೋಮವಾರ ಪ್ರಕಟಿಸಿರುವ ಕೋವಿಡ್ ವರದಿಯಂತೆ ಕೊರೊನಾ ಸೋಂಕಿಗೆ 31 ಮಂದಿ ಬಲಿಯಾಗಿದ್ದಾರೆ. ಇದರಲ್ಲಿ ಇಬ್ಬರು ಯುವತಿಯರು ಕೂಡ ಸೇರಿದ್ದಾರೆ.

ಉಸಿರಾಟದ ಸಮಸ್ಯೆ ಎದುರಿಸುತ್ತಿದ್ದ 21 ವರ್ಷದ ಯುವತಿಗೆ ಸೋಂಕು ತಗಲಿರುವುದು ದೃಢಪಟ್ಟಿತ್ತು. ಹೀಗಾಗಿ, ಆಕೆಯನ್ನು ಜು. 17ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಅದೇ ದಿನ ಮೃತಪಟ್ಟಿದ್ದಾಳೆ. ಹಾಗೆಯೇ, ಸೋಂಕಿಗೆ ತುತ್ತಾಗಿದ್ದ 22 ವರ್ಷದ ಯುವತಿಯನ್ನು ಜು. 16ರಂದು ಆಸ್ಪತ್ರೆಗೆ ಸೇರಿಸಲಾಗಿತ್ತು. ಆದರೆ, ಅದೇ ದಿನ ಸಾವನ್ನಪ್ಪಿದ್ದಾಳೆ. ಈಕೆಗೆ ಸೋಂಕು ತಗಲಿದ್ದು ಹೇಗೆ ಎಂಬುದು ಪತ್ತೆಯಾಗಿಲ್ಲ.

ಉಪ ಮೇಯರ್ ಕಚೇರಿ ಸಿಬ್ಬಂದಿಗೆ ಸೋಂಕು: ಬಿಬಿಎಂಪಿ ಉಪಮೇಯರ್ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯೊಬ್ಬರಿಗೆ ಕೊರೊನಾ ಸೋಂಕು ತಗಲಿರುವುದು ದೃಢಪಟ್ಟಿದೆ.

ಅಮೃತಹಳ್ಳಿ ಪಿಎಚ್‌ಸಿ ಸೀಲ್‌ಡೌನ್



ಕೊಡಿಗೇಹಳ್ಳಿ ಆರೋಗ್ಯ ಕೇಂದ್ರದ ವೈದ್ಯರಿಗೆ ಪಾಸಿಟಿವ್ ಹಿನ್ನೆಲೆಯಲ್ಲಿ ಸಾರ್ವಜನಿಕರ ಪ್ರವೇಶ ನಿಷೇಧಿಸಿದ್ದು, ಹೊರಗಡೆ ತಪಾಸಣೆ ಮಾಡಲಾಗುತ್ತಿದೆ.

ಸ್ವ್ಯಾಬ್ ಸಂಗ್ರಹಿಸುತ್ತಿದ್ದ ಸಿಬ್ಬಂದಿಗೆ ಕೊರೊನಾ ಸೋಂಕು ದೃಢಪಟ್ಟ ಹಿನ್ನೆಲೆಯಲ್ಲಿ ಬ್ಯಾಟರಾಯನಪುರ ವಾರ್ಡ್‌ನ ಅಮೃತಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸೀಲ್‌ಡೌನ್ ಮಾಡಲಾಗಿದೆ.

ಜು.27ರ ವರೆಗೆ ಪಿಎಚ್‌ಸಿ ಮುಚ್ಚಿರಲಿದೆ. ಇದಲ್ಲದೆ, ಕೊಡಿಗೇಹಳ್ಳಿ ವಾರ್ಡ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಲ್ಲಿ ಸೋಂಕು ದೃಢಪಟ್ಟಿದೆ. ಆರೋಗ್ಯ ಕೇಂದ್ರದಲ್ಲಿ ಸೋಂಕು ನಿವಾರಕ ಸಿಂಪಡಿಸಿದ್ದು, ಸದ್ಯ ಕೇಂದ್ರದ ಹೊರಗಡೆ ತಪಾಸಣೆ ನಡೆಸಲಾಗುತ್ತಿದೆ.

HITACHI ABB

ಎಬಿಬಿ ಪವರ್ ಪ್ರಾಡಕ್ಟ್ಸ್ ಅಂಡ್ ಸಿಸ್ಟಮ್ಸ್ ಇಂಡಿಯಾ ಲಿಮಿಟೆಡ್

CIN: U31904KA2019PLC121597

ನೋಂದಾಯಿತ ಕಚೇರಿ: 8ನೇ ಮಹಡಿ, ಬ್ರಿಗೇಡ್ ಓಪಸ್, 70/401, ಕೊಡಿಗೇಹಳ್ಳಿ ಮುಖ್ಯ ರಸ್ತೆ, ಬೆಂಗಳೂರು -560 092
ವೆಬ್‌ಸೈಟ್: https://www.hitachiabb-powergrids.com/in/en; **ಇ-ಮೇಲ್:** in-investorhelpdesk_appsil@abb.com;
ದೂರವಾಣಿ ಸಂಖ್ಯೆ: +91 80 2204 1800

1ನೇ ವಾರ್ಷಿಕ ಮಹಾಸಭೆ, ದಾಖಲೆ ಪುಸ್ತಕ ಮುಚ್ಚುವಿಕೆ ಮತ್ತು ಪರೋಕ್ಷ ಇ-ಮತದಾನದ ಮಾಹಿತಿ ಪ್ರಕಟಣೆ

(ಎ) ವಾರ್ಷಿಕ ಮಹಾಸಭೆ ಮತ್ತು ದಾಖಲೆ ಪುಸಕ್ತ ಮುಚ್ಚುವಿಕೆ:

ಮಂಗಳವಾರ, ಆಗಸ್ಟ್ 13, 2020ರಂದು ಬೆಳಿಗ್ಗೆ 11.00 ಗಂಟೆಗೆ (IST) ಇಲ್ಲಿ ದಿನಾಂಕ ಜುಲೈ 20, 2020ರ ಸೂಚನೆಯಲ್ಲಿ ನಮೂದಿತ ವ್ಯವಹಾರಗಳನ್ನು ನಡೆಸಲು, ಕಂಪನಿಯ ಸದಸ್ಯರ 1ನೇ ವಾರ್ಷಿಕ ಮಹಾಸಭೆಯನ್ನು (AGM) ವಿಡಿಯೋ ಕಾನ್ಫೆರೆನ್ಸಿಂಗ್ ಮೂಲಕ ("VC")/ ಇತರೆ ಆಡಿಯೋ ವಿಷುವಲ್ ಮೀನ್ಸ್ ("OAVM") ಮೂಲಕ ನಡೆಸಲಾಗುವುದೆಂದು ಈ ನೋಟೀಸಿನ ಮೂಲಕ ಸೂಚನೆ ನೀಡಲಾಗಿದೆ. ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯ ಮತ್ತು ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನೀಡಲಾದ ಸುತ್ತೋಲೆಗಳ ಅನುಸಾರ ಕಂಪನಿಗಳಿಗೆ AGM ಅನ್ನು VC / OAVM ಮೂಲಕ ನಡೆಸಲು ಅನುಮತಿ ನೀಡಲಾಗಿರುವ ಕಾರಣ ಕಂಪನಿಯ ಸದಸ್ಯರ 1ನೇ ವಾರ್ಷಿಕ ಮಹಾಸಭೆಯನ್ನು VC / OAVM ಮೂಲಕ ನಡೆಸಲಾಗುವುದು.

ಸುತ್ತೋಲೆಗಳ ಹೇಳಿಕೆಯನ್ವಯ 31ನೇ ಡಿಸೆಂಬರ್, 2019 ರಲ್ಲಿದ್ದಂತೆ ಪರಿಶೋಧಿತ ಸ್ಥಿತಿ ವಿವರಣೆ ಡಿಸೆಂಬರ್ 31, 2019ರ ಅಂತ್ಯದ ವೇಳೆಗೆ ಪರಿಶೋಧಿತ ಲಾಭ ಮತ್ತು ನಷ್ಟಗಳ ವಿವರಣೆ ಮತ್ತು ಆ ವರ್ಷದ ನಗದು ಹರಿವಿನ ವಿವರಣೆಗಳೊಂದಿಗೆ, ಈ ಅವಧಿಗಾಗಿ ನಿರ್ದೇಶಕರು ಮತ್ತು ಲೆಕ್ಕಶೋಧಕರ ವರದಿಗಳನ್ನು ಲಗತ್ತಿಸಿ ಕಂಪನಿ/ಡೆಪಾಸಿಟರಿ ಭಾಗೀದಾರ (ರ)/ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, (ಕೆಫಿನ್‌ಟೆಕ್), ಕಂಪನಿಯ ರೆಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರುಗಳೊಂದಿಗೆ ನೋಂದಾಯಿತರಾದ ಎಲ್ಲಾ ಸದಸ್ಯರ ಇ-ಮೇಲ್ ವಿಳಾಸಗಳಿಗೆ ರವಾನಿಸಲಾಗಿದೆ. ಕಂಪನಿ/ಡೆಪಾಸಿಟರಿ ಭಾಗೀದಾರ (ರ) ರಲ್ಲಿ ಇಮೇಲ್‌ಗಳನ್ನು ನೋಂದಾಯಿಸದಿರುವವರು ಎಜಿಎಂ ನೋಟೀಸು ಮತ್ತು ವಾರ್ಷಿಕ ವರದಿಯನ್ನು ಕಂಪನಿಯ ವೆಬ್‌ಸೈಟ್:https://www.hitachiabb-powergrids.com/in/en/about-us/investor-relations/financial-results--reports-and-presentations ರಲ್ಲಿ ಅಪ್‌ಲೋಡ್ ಮಾಡಲಾಗಿದೆ. AGM ನೋಟೀಸು ಮತ್ತು ವಾರ್ಷಿಕ ವರದಿಯು ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ ವೆಬ್‌ಸೈಟ್‌ಗಳಾದ ಬಿಎಸ್‌ಇ ಲಿಮಿಟೆಡ್ - www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್‌ನ www.nseindia.com ಗಳಲ್ಲಿ ಲಭ್ಯವಿದೆ. ಕಂಪನಿ/ಡೆಪಾಸಿಟರಿ ಭಾಗೀದಾರ (ರ) ರೊಂದಿಗೆ ತಮ್ಮ ಇಮೇಲ್ ವಿಳಾಸವನ್ನು ನೋಂದಣಿ ಮಾಡದ ಸದಸ್ಯರು AGM ನೋಟೀಸು ಮತ್ತು ವಾರ್ಷಿಕ ವರದಿಯನ್ನು ಮೇಲೆ ಹೇಳಲಾದ ಯಾವುದೇ ವೆಬ್‌ಸೈಟ್‌ಗಳಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಯಾವ ಸದಸ್ಯರ ಇ-ಮೇಲ್ ವಿಳಾಸವು ಕೆಫಿನ್‌ಟೆಕ್ / ಡೆಪಾಸಿಟರಿ ಭಾಗೀದಾರ (ರ) ರೊಂದಿಗೆ ನೋಂದಣಿಯಾಗದಿದ್ದಲ್ಲಿ ಇಮೇಲ್ ನೋಂದಣಿಗಾಗಿ ಮತ್ತು ಇಮೇಲ್‌ನಿಂದ AGM ನೋಟೀಸು, ವಾರ್ಷಿಕ ವರದಿ ಮತ್ತು ಇ-ಮತದಾನ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು ಲಿಂಕ್:https://ris.kfintech.com/email_registration/ for registration of E-mail address ಗೆ ಭೇಟಿ ನೀಡಿ. ಇಮೇಲ್ ನೋಂದಣಿಗಾಗಿ ವಿವರವಾದ ವಿಧಾನ ಮತ್ತು ಇ-ಮತದಾನ ಯೂಸರ್ ಐಡಿ ಪಡೆಯಲು ಮತ್ತು ಪಾಸ್‌ವರ್ಡ್ ಮತ್ತು ಪರೋಕ್ಷ ಮತದಾನದ ವಿಧಾನ ಅಥವಾ AGM ವೇಳೆ ಇ-ಮತದಾನಕ್ಕೆ ಸದಸ್ಯರು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುವ AGM ನೋಟೀಸನ್ನು ಪರಿಶೀಲಿಸಲು ಕೋರಲಾಗಿದೆ. ಸದಸ್ಯರು VC / OAVM ಮೂಲಕ ಎಜಿಎಂನಲ್ಲಿ ಭಾಗವಹಿಸಲು ಸೂಚನೆಗಳಿಗಾಗಿ AGM ನೋಟೀಸು ಪರಿಶೀಲಿಸುವುದು ಮತ್ತು AGMನ ವೆಬ್‌ಕಾಸ್ಟ್ ನೋಡುವುದು. AGM ಸಂಬಂಧಿತ ದಾಖಲಾತಿಗಳು ಕಂಪನಿಯ ಕಛೇರಿಯಲ್ಲಿ ಯಾವುದೇ ಕೆಲಸದ ದಿನದಂದು ಕೆಲಸದ ವೇಳೆಯಲ್ಲಿ AGM ದಿನದವರೆಗೆ ಸದಸ್ಯರ ವಿದ್ಯುನ್ಮಾನ ಪರಿಶೀಲನೆಗೆ ತೆರೆದಿರುತ್ತದೆ.

ಅಲ್ಲದೇ, ಕಂಪನಿ ಕಾಯಿದೆ 2013ರ ಕಲಂ, 91 ಮತ್ತು ಸೆಬಿ (ಲಿಸ್ಟಿಂಗ್ ಮತ್ತು ಘೋಷಣಾ ಅಗತ್ಯಗಳು) ನಿಬಂಧನೆಗಳು 2015ರ (ಲಿಸ್ಟಿಂಗ್ ನಿಬಂಧನೆಗಳು) 42ನೇ ನಿಬಂಧನೆಗಳ ಅನುಸಾರ ಕಂಪನಿಯ ಸದಸ್ಯರ ದಾಖಲಾತಿ ಪುಸ್ತಕ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು ಆಗಸ್ಟ್ 7, 2020ರಿಂದ ಆಗಸ್ಟ್ 13, 2020ರವರೆಗೆ (ಎರಡೂ ದಿನಾಂಕಗಳು ಸೇರಿದಂತೆ) ಮುಚ್ಚಲ್ಪಟ್ಟಿರುವುದಾಗಿಯೂ ಈ ಮೂಲಕ ಸೂಚಿಸಲಾಗಿದೆ.

(ಬಿ) ಪರೋಕ್ಷ ಇ-ಮತದಾನ:

ಕಂಪನಿಗಳ ಕಾಯಿದೆ, 2013ರ ಕಲಂ 108 ಗಳ ಪ್ರಾವಧಾನಗಳು ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ 20ನೇ ನಿಯಮ, ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿಗಳು ಹಾಗೂ ಲಿಸ್ಟಿಂಗ್ ನಿಬಂಧನೆಗಳ 44ನೇ ನಿಬಂಧನೆಯ ಪ್ರಾವಧಾನಗಳನ್ವಯ ಸದಸ್ಯರಿಗೆ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಕೆಫಿನ್‌ಟೆಕ್) ರವರಿಂದ ಒದಗಿಸಲಾದ ಇ-ಮತದಾನದ ವ್ಯವಸ್ಥೆಯ ಮೂಲಕ, ಈ ಸೂಚನೆಯಲ್ಲಿ ನಮೂದಿತ ಗೊತ್ತುವಳಿಗಳಿಗೆ ವಿದ್ಯುನ್ಮಾನ ವಿಧಾನದಲ್ಲಿ ಮತ ಚಲಾವಣೆಯ ಸೌಲಭ್ಯ ಒದಗಿಸಲಾಗಿದೆ. ವಿದ್ಯುನ್ಮಾನ ವಿಧಾನದ ಮೂಲಕ ಮತ ಚಲಾಯಿಸಿ ವ್ಯವಹರಿಸುವ ವಿಷಯಗಳು ಕೆಳಕಂಡಂತಿವೆ.

ಸಾಮಾನ್ಯ ವ್ಯವಹಾರಗಳು:

1. ಡಿಸೆಂಬರ್ 31, 2019ಕ್ಕೆ ಕೊನೆಗೊಂಡ ವರ್ಷಕ್ಕಾಗಿ ವಿತ್ತೀಯ ವಿವರಣೆಗಳು ಹಾಗೂ ನಿರ್ದೇಶಕರ ಮಂಡಳಿ ಮತ್ತು ಲೆಕ್ಕ ಪರಿಶೋಧಕರ ವರದಿಗಳನ್ನು ಅಳವಡಿಸಿಕೊಳ್ಳುವುದು.
2. ನಿರ್ದೇಶಕರೊಬ್ಬರ ನೇಮಕಾತಿ.
3. 5 ವರ್ಷಗಳ ಅವಧಿಗಾಗಿ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ

ಕ್ರ.ಸಂ.	ವಿವರ / ಚಟುವಟಿಕೆ	ವಿವರಗಳು
1.	ಪರೋಕ್ಷ ಇ-ಮತದಾನದ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕ ಮತ್ತು ಸಮಯ	ಆರಂಭ: ಸೋಮವಾರ, ಆಗಸ್ಟ್ 10, 2020ರಂದು ಬೆಳಿಗ್ಗೆ 9.00 ಗಂಟೆಗೆ ಮುಕ್ತಾಯ: ಬುಧವಾರ, ಆಗಸ್ಟ್ 12, 2020ರಂದು ಸಂಜೆ 5.00 ಗಂಟೆ
2.	ಕಟ್-ಆಫ್ ದಿನಾಂಕ	ಗುರುವಾರ, ಆಗಸ್ಟ್ 6, 2020

ಪರೋಕ್ಷ ಇ-ಮತದಾನದ ಮಾದರಿಯನ್ನು ಬುಧವಾರ, ಆಗಸ್ಟ್ 12, 2020ರ ಸಂಜೆ 5.00 ಗಂಟೆಯ ನಂತರ ಸ್ಥಗಿತಗೊಳಿಸಲಾಗುವುದು. ಸದಸ್ಯರು ಒಂದು ಸಲ ಗೊತ್ತುವಳಿಯ ಮೇಲೆ ಮತ ಚಲಾಯಿಸಿದ ನಂತರ ಆತನು/ಆಕೆಯು ಅದನ್ನು ಪುನಃ ಬದಲಾಯಿಸಲು ಅವಕಾಶ ನೀಡಲಾಗುವುದಿಲ್ಲ. ವಿದ್ಯುನ್ಮಾನ ವಿಧಾನದಲ್ಲಿ ಮತ ಚಲಾಯಿಸದ ಸದಸ್ಯರು ತಮ್ಮ ಮತವನ್ನು AGM ನಲ್ಲಿ ಇ-ಮತದಾನದ ಮೂಲಕ ಚಲಾಯಿಸಬಹುದು. ಕಂಪನಿಯು AGM ವೇಳೆ ಇ-ಮತದಾನಕ್ಕಾಗಿ ಅಗತ್ಯ ವ್ಯವಸ್ಥೆ ಮಾಡುತ್ತದೆ. ಸಭೆಗೆ ಮುಂಚಿತವಾಗಿ ಪರೋಕ್ಷ ಇ-ಮತದಾನದ ಮೂಲಕ ಮತ ನೀಡಿರುವ ಸದಸ್ಯರೂ ಮಹಾಸಭೆಗೆ ಹಾಜರಾಗಬಹುದು ಆದರೆ ಅವರು ಮಹಾಸಭೆಯಲ್ಲಿ ಮತ್ತೊಮ್ಮೆ ಮತ ಚಲಾಯಿಸುವಂತಿಲ್ಲ. ಕಟ್-ಆಫ್ ದಿನಾಂಕ ಗುರುವಾರ ಆಗಸ್ಟ್ 6, 2020ರಂದು ಸದಸ್ಯರ ದಾಖಲೆ ಪುಸ್ತಕದಲ್ಲಿ ಅಥವಾ ಡೆಪಾಸಟರಿಗಳು ಇಟ್ಟಿರುವ ಫಲಾನುಭವಿ ಮಾಲೀಕರ ದಾಖಲಾತಿಯಲ್ಲಿ ತಮ್ಮ ಹೆಸರು ದಾಖಲಾಗಿರುವ ಸದಸ್ಯರು ಮಾತ್ರ AGMವೇಳೆ ಪರೋಕ್ಷ ಇ-ಮತದಾನ/ ಇ-ಮತದಾನ ಸೌಲಭ್ಯ ಪಡೆಯಲು ಅರ್ಹರು.

ವೆಬ್‌ಕಾಸ್ಟ್ ಸೌಲಭ್ಯ: ಕಂಪನಿಯು ಸದಸ್ಯರಿಗೆ AGMನ ಪ್ರಕ್ರಿಯೆಯಲ್ಲಿ ವೆಬ್‌ಕಾಸ್ಟ್ ಸೌಲಭ್ಯ ನೀಡುವುದೆಂದು ಗಮನದಲ್ಲಿಟ್ಟುಕೊಳ್ಳಬೇಕು. AGMನಲ್ಲಿ ಭಾಗವಹಿಸಲಿಚ್ಚಿಸುವ ಸದಸ್ಯರು ಅವರ ಇ-ಮತದಾನ ಲಾಗಿನ್ ರುಜುವಾತುಗಳನ್ನು ಬಳಸಿ ವೆಬ್‌ಸೈಟ್: KFintech at https: //emeetings.kfintech.com/ ಗೆ ಲಾಗ್‌ಇನ್ ಆಗಿ AGMನ ಪ್ರಕ್ರಿಯೆಯನ್ನು ನೋಡಬಹುದು.

ಪರೋಕ್ಷ ಇ-ಮತದಾನಕ್ಕಾಗಿ ಮತ್ತು AGMನ ನೋಟೀಸು ನೀಡಲಾದ ದಿನಾಂಕದ ನಂತರ ಕಟ್ ಆಫ್ ದಿನಾಂಕದ ಷೇರುಗಳನ್ನು ಪಡೆದು ಗುರುವಾರ ಆಗಸ್ಟ್ 6, 2020ರಲ್ಲಿದ್ದಂತೆ ಕಂಪನಿಯ ಷೇರುಗಳನ್ನು ಹೊಂದಿರುವ ಹೂಡಿಕೆದಾರರು ಯಾವುದೇ ವಿಚಾರಣೆ/ಸ್ಪಷ್ಟೀಕರಣ/ಕುಂದುಕೊರತೆಗಳಿಗಾಗಿ ತಮ್ಮ ಡಿಪಿ ಐಡಿ ಕ್ಲೈಂಟ್ ಐಡಿ/ಫೋಲಿಯೊ ಸಂಖ್ಯೆಗಳ ವಿವರಗಳೊಂದಿಗೆ ಶ್ರೀಮತಿ ಸಿ. ಶೋಭಾ ಆನಂದ್, ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಕೆಫಿನ್‌ಟೆಕ್) ದೂ:+91 40 6716 2222 ಅಥವಾ ಟೋಲ್ ಫ್ರೀ ಸಂಖ್ಯೆ 1800 -345 -4001 ಅಥವಾ ಇಮೇಲ್:shobha.anand@kfintech.com ದೂ:040 6716 2222 ಇವರನ್ನು ಸಂಪರ್ಕಿಸಿ. ಪರೋಕ್ಷ ಮತದಾನಕ್ಕಾಗಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು ಕೋರಬಹುದು ಅಥವಾ ಕಂಪನಿಯ ಇಮೇಲ್ ಐಡಿ: in-investorhelpdesk_appsil@abb.comಗೆ ಮೇಲ್ ಮಾಡಿ.

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ

ಎಬಿಬಿ ಪವರ್ ಪ್ರಾಡಕ್ಟ್ಸ್ ಅಂಡ್ ಸಿಸ್ಟಮ್ಸ್ ಇಂಡಿಯಾ ಲಿಮಿಟೆಡ್ ಪರವಾಗಿ

ಪೂವಣ್ಣ ಅಮ್ಮಾಟಂಡ
ಜನರಲ್ ಕೌನ್ಸೆಲ್ ಮತ್ತು ಕಂಪನಿ ಕಾರ್ಯದರ್ಶಿ
FCS - 4741

ಬೆಂಗಳೂರು, ಜುಲೈ 20, 2020

ಮ್ಯಾಟ್ರಿಮೊನಿ ತಾಣದ ವಂಚಕನ ಬಂಧನ

▪ **ವಿಕ ಸುದ್ದಿಲೋಕ** ಬೆಂಗಳೂರು

ಹಲವು ಹೆಸರಿನಲ್ಲಿ ನಾನಾ ಮೊಬೈಲ್ ನಂಬರ್‌ಗಳನ್ನು ನೀಡಿ ವೈವಾಹಿಕ ಜಾಲತಾಣದಲ್ಲಿ ಯುವತಿಯರನ್ನು ವಂಚಿಸಿ ಲಕ್ಷಾಂತರ ರೂಪಾಯಿ ಸುಲಿಗೆ ಮಾಡುತ್ತಿದ್ದವನನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಜಯಪುರ ಮೂಲದ ಸಜ್ಜನ್ ಅಲಿಯಾಸ್ ಜಗನ್ನಾಥ್ ಅಲಿಯಾಸ್ ರಮೇಶ್(34) ಬಂಧಿತ ಆರೋಪಿ. ಸದ್ಯ ಮೂವರು ಯುವತಿಯರಿಗೆ ಈತ ವಂಚಿಸಿರುವುದು ವಿಚಾರಣೆಯಿಂದ ತಿಳಿದುಬಂದಿದೆ. ಹಲವರನ್ನು ವಂಚಿಸಿದ ಶಂಕೆ ಇದೆ.

ಈತನಿಂದ ಇದುವರೆಗೂ 30ಕ್ಕೂ ಹೆಚ್ಚು ಸಿಮ್ ಕಾರ್ಡ್‌ಗಳು, 6.80 ಲಕ್ಷ ರೂ. ನಗದು, ಕಾರು, 2 ಮೊಬೈಲ್, 5 ಬ್ಯಾಂಕ್ ಪಾಸ್‌ಬುಕ್, 22 ಎಟಿಎಂ ಕಾರ್ಡ್, 3 ಪಾನ್‌ಕಾರ್ಡ್ ಜಪ್ತಿ ಮಾಡಲಾಗಿದೆ ಎಂದು ದಕ್ಷಿಣ ವಿಭಾಗದ ಡಿಸಿಪಿ ಡಾ. ರೋಹಿಣಿ ಕಟೋಚ್ ಮಾಹಿತಿ ನೀಡಿದ್ದಾರೆ.

ಹಿಪ್ಪರಗಿಯ ಜಗನ್ನಾಥ್, ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಕೆಲಸ ಕಳೆದುಕೊಂಡ ಬಳಿಕ ವೈವಾಹಿಕ ಜಾಲತಾಣಗಳಲ್ಲಿ ಯುವತಿಯರನ್ನು ವಂಚಿಸಲು ಶುರುಮಾಡಿದ. ಇದಕ್ಕಾಗಿ ತನ್ನನ್ನು ಸಾಫ್ಟ್‌ವೇರ್ ಎಂಜಿನಿಯರ್ ಎಂದು ಪ್ರೊಫೈಲ್ ಸೃಷ್ಟಿಸಿದ್ದ. ಇಷ್ಟಪಟ್ಟವರ ಮೊಬೈಲ್ ನಂಬರ್ ಪಡೆದು ಕೆಲ ಚಾಟ್ ಮಾಡಿ ಆತ್ಮೀಯತೆ ಬೆಳೆಸಿಕೊಂಡು ಮದುವೆಯಾಗುವುದಾಗಿ ನಂಬಿಸಿ ಲಕ್ಷಗಟ್ಟಲೆ ಹಣ ಸಾಲದ ರೂಪದಲ್ಲಿ ಪಡೆಯುತ್ತಿದ್ದ.

2019ರಲ್ಲಿ ಕದಿರೇನಹಳ್ಳಿಯ ವಿಚ್ಛೇದಿತ ಮಹಿಳೆಯೊಬ್ಬರನ್ನು ಮದುವೆಯಾಗುವುದಾಗಿ ನಂಬಿಸಿ ತನ್ನ ಪರಿಚಯಸ್ಥರಲ್ಲಿ 5 ಲಕ್ಷ ರೂ. ಚೀಟಿ ಕಟ್ಟಿಸಿದ್ದ. ಕೆಲ ತಿಂಗಳ ಬಳಿಕ ನಿವೇಶನ ಖರೀದಿಸುತ್ತಿದ್ದು, ನೋಂದಣಿಗೆ 7 ಲಕ್ಷ ರೂ. ಕಡಿಮೆ ಬಿದ್ದಿದೆ ಎಂದು ಹೇಳಿ ಅಷ್ಟೂ ಹಣ ಪಡೆದು ಮೊಬೈಲ್ ಸ್ವಿಚ್ ಆಫ್ ಮಾಡಿ ತಲೆತಪ್ಪಿಸಿಕೊಂಡು ತಿರುಗುತ್ತಿದ್ದ. ಮಹಿಳೆ ಬೆನ್ನು ಬಿದ್ದಾಗ ಜೀವ ಬೆದರಿಕೆ ಹಾಕಿದ್ದ. ಬಳಿಕ ಮಹಿಳೆ ಬನಶಂಕರಿ ಠಾಣೆಗೆ ದೂರು ನೀಡಿದ್ದರು.

ಶೇ.50 ಹಾಸಿಗೆ ಒದಗಿಸಲು ಆಸ್ಪತ್ರೆಗಳ ಮನವೊಲಿಕೆ ಯಶಸ್ವಿ

▪ **ವಿಕ ಸುದ್ದಿಲೋಕ** ಬೆಂಗಳೂರು/ ಮಹಾಲಕ್ಷ್ಮಿ ಲೇಔಟ್

ಕೋವಿಡ್-19 ರೋಗಿಗಳಿಗೆ ಹಾಸಿಗೆಗಳ ಕೊರತೆಯಾಗುತ್ತಿದೆ ಎಂಬ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಖಾಸಗಿ ಆಸ್ಪತ್ರೆಗಳಿಂದ ನಿಗದಿತ ಶೇ.50ರಷ್ಟು ಹಾಸಿಗೆಗಳನ್ನು ಪಡೆಯುವ ನಿಟ್ಟಿನಲ್ಲಿ ಸರಕಾರ ಕ್ರಮಗಳನ್ನು ಕೈಗೊಂಡಿದೆ.

ಡಿಸಿಎಂ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಅವರು ಸೋಮವಾರ ನಗರದ ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್‌ಗೆ ಭೇಟಿ ನೀಡಿ ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿರುವ ಖಾಸಗಿ ಆಸ್ಪತ್ರೆಗಳ ಮಾಲೀಕರು, ವ್ಯವಸ್ಥಾಪಕರ ಜತೆ ಮಾತುಕತೆ ನಡೆಸಿದರಲ್ಲದೆ, ಕೂಡಲೇ ಹಾಸಿಗೆಗಳನ್ನು ನೀಡುವಂತೆ ಮನವೊಲಿಸಿದರು.

''ಅಕ್ಟೋಬರ್ ಹೊತ್ತಿಗೆ ಸೋಂಕು ಮತ್ತಷ್ಟು ವ್ಯಾಪಿಸಲಿದೆ ಎಂದು ಐಸಿಎಂಆರ್ ಈಗಾಗಲೇ ಎಚ್ಚರಿಕೆ ನೀಡಿದೆ. ಹೀಗಾಗಿ, ಸರಕಾರ ಎಲ್ಲ ರೀತಿಯಲ್ಲೂ ಸನ್ನದ್ಧಗೊಳ್ಳಲೇಬೇಕು. ಆದ್ದರಿಂದ ಎರಡೂ ಕ್ಷೇತ್ರಗಳಲ್ಲಿರುವ ಖಾಸಗಿ ಆಸ್ಪತ್ರೆಗಳು ಕೂಡಲೇ ತಮ್ಮಲ್ಲಿರುವ ಒಟ್ಟು ಹಾಸಿಗೆಗಳ ಪೈಕಿ ಶೇ.50ರಷ್ಟನ್ನು ಸರಕಾರಕ್ಕೆ ನೀಡಲೇಬೇಕು.'' ಎಂದು ಡಿಸಿಎಂ ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರಿಗೆ ಮನವರಿಕೆ ಮಾಡಿದರು. ಡಿಸಿಎಂ ಮಾತಿಗೆ ಕಿವಿಗೊಟ್ಟ ಹಲವಾರು ಆಸ್ಪತ್ರೆಗಳ ಮುಖ್ಯಸ್ಥರು, ಕೂಡಲೇ ತಮ್ಮಲ್ಲಿರುವ ಹಾಸಿಗೆಗಳಲ್ಲಿ ಅರ್ಧದಷ್ಟನ್ನು ಸರಕಾರಕ್ಕೆ ನೀಡಲಾಗುವುದು ಎಂದು ಭರವಸೆ ನೀಡಿದರು.

ರಾಜಾಜಿನಗರ ಸಭೆಯಲ್ಲಿ ಸಚಿವ ಸುರೇಶ್ ಕುಮಾರ್ ಹಾಗೂ ಮಹಾಲಕ್ಷ್ಮಿ ಲೇಔಟ್ ಸಭೆಯಲ್ಲಿ ಸಚಿವ ಕೆ. ಗೋಪಾಲಯ್ಯ ಉಪಸ್ಥಿತರಿದ್ದರು.

ಖಡಕ್ ಎಚ್ಚರಿಕೆ

''ನಾಳೆ ಹೊತ್ತಿಗೆ ಎಲ್ಲ ಆಸ್ಪತ್ರೆಗಳು ಹಾಸಿಗೆಗಳನ್ನು ಸರಕಾರದ ವಶಕ್ಕೆ ನೀಡಬೇಕು. ತಪ್ಪಿದರೆ ಐಎಎಸ್ ಅಧಿಕಾರಿಗಳು ತಪಾಸಣೆಗೆ ಬರಲಿದ್ದಾರೆ. ಒಂದು ವೇಳೆ ಆಗ ಸಿಕ್ಕಿಬಿದ್ದರೆ ಕೂಡಲೇ ಆಸ್ಪತ್ರೆಯ ಪರವಾನಗಿಯೇ ರದ್ದಾಗುತ್ತದೆ. ಇಂಥ ಕ್ರಮಕ್ಕೆ ಅವಕಾಶ ಮಾಡಿಕೊಡಬೇಡಿ,'' ಎಂದು ಡಿಸಿಎಂ ಎಚ್ಚರಿಕೆ ನೀಡಿದರು.

ಆಟೊದಲ್ಲೇ ಹೆರಿಗೆ, ಮಗು ಸಾವು

» ನಮ್ಮ ಮೊದಲ ಪುಟದಿಂದ

ಆಸ್ಪತ್ರೆಯ ವೈದ್ಯರು ಹೆರಿಗೆ ಮಾಡಿದ್ದಾರೆ. ಆದರೆ, ಆಸ್ಪತ್ರೆಗಳು ದಾಖಲಿಸಿಕೊಳ್ಳಲು ನಿರಾಕರಿಸಿವೆ ಎಂದು ಮಹಿಳೆಯ ಸಹೋದರ ಆರೋಪಿಸಿದ್ದಾರೆ.

ಈ ಕುರಿತು ಮಾತನಾಡಿದ ಆಸ್ಪತ್ರೆಯ ಅಧೀಕ್ಷಕ ವೈದ್ಯ ಡಾ. ವೆಂಕಟೇಶಯ್ಯ, ''ಭಾನುವಾರ ರಾತ್ರಿ 2.30ಕ್ಕೆ ಮಹಿಳೆಯನ್ನು ಕರೆತರಲಾಗಿತ್ತು. ಪರೀಕ್ಷಿಸಿದ ವೈದ್ಯರು ಹೊಟ್ಟೆಯಲ್ಲೇ ಮಗುವಿನ ಹೃದಯ ಬಡಿತ ನಿಂತಿರುವುದನ್ನು ಖಚಿತಪಡಿಸಿದರು. ಆದರೆ, ಮಗು ಚೆನ್ನಾಗಿದೆ. ಚಲನೆಯಿದೆ. ನಾವು ಬೇರೆ ಕಡೆ ಹೋಗುತ್ತೇವೆಂದು ಹೇಳಿ ಮಹಿಳೆ ಕುಟುಂಬದವರು ಆಸ್ಪತ್ರೆಯಿಂದ ಹೋದರು. ಎರಡು ಆಸ್ಪತ್ರೆಗಳಿಗೆ ಸುತ್ತಾಡಿ ವಾಪಸ್ ಆಸ್ಪತ್ರೆಗೆ ಬಂದರು. ಕರೆತರುವಷ್ಟರಲ್ಲೇ ಆಟೊದಲ್ಲೇ ಹೆರಿಗೆಯಾಗಿದೆ. ನಂತರ ದಾಖಲಿಸಿಕೊಂಡು ಹೆರಿಗೆ ಪೂರ್ಣಗೊಳಿಸಲಾಗಿದೆ. ಶಸ್ತ್ರಚಿಕಿತ್ಸೆ ನಡೆಸಿದ ವೈದ್ಯರ ಪ್ರಕಾರ, ಮಗು ಎರಡು-ಮೂರು ದಿನಗಳ ಹಿಂದೆಯೇ ಮೃತಪಟ್ಟಿದೆ. 32ರಿಂದ 34 ವಾರಗಳ ಗರ್ಭಿಣಿಯಾಗಿದ್ದು, ಅವಧಿ ಪೂರ್ಣವಾಗಿ ಮಗು ಜನಿಸಿದೆ. ಸಾಮಾನ್ಯವಾಗಿ 37ರಿಂದ 38 ವಾರಗಳಾಗಿದ್ದರೆ ಪೂರ್ಣಾವಧಿಯ ಗರ್ಭಿಣಿಯಾದಂತೆ'' ಎಂದು ತಿಳಿಸಿದರು.

ಸೋಮಣ್ಣ ಹುಟ್ಟುಹಬ್ಬ ಅಂಗವಾಗಿ ಮಾಸ್ಕ್ ವಿತರಣೆ

ಡಾ.ರಾಜ್ ಕುಮಾರ್ ವಾರ್ಡ್ ಬಿಜೆಪಿ ಮುಖಂಡ ಎಚ್ ರಮೇಶ್ ಮತ್ತು ಸ್ನೇಹಿತರು ಹುಟ್ಟುಹಬ್ಬದ ಪ್ರಯುಕ್ತ ವಸತಿ ಸಚಿವ ವಿ.ಸೋಮಣ್ಣ ಅವರನ್ನು ಅಭಿನಂದಿಸಿದರು.

▪ **ವಿಕ ಸುದ್ದಿಲೋಕ** ಬೆಂಗಳೂರು

ಸಚಿವ ವಿ. ಸೋಮಣ್ಣನವರ 69ನೇ ಹುಟ್ಟುಹಬ್ಬದ ಅಂಗವಾಗಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅವರ ಅಭಿಮಾನಿಗಳು ಸುಮಾರು 20 ಸಾವಿರ ಮಾಸ್ಕ್, ಸ್ಯಾನಿಟೈಸರ್‌ಗಳನ್ನು ಸಾರ್ವಜನಿಕರಿಗೆ ಹಂಚಿದರು.

ಕರೊನಾ ಸಂಕಷ್ಟ ಪರಿಸ್ಥಿತಿಯಲ್ಲಿ ಹುಟ್ಟುಹಬ್ಬ ಆಚರಣೆ ಬೇಡ ಎಂದು ಅಭಿಮಾನಿಗಳಿಗೆ ಸಚಿವ ಸೋಮಣ್ಣ ಸೂಚಿಸಿದ್ದರು. ಹೀಗಾಗಿ ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳಲಾಯಿತು. ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 20,000 ಮಾಸ್ಕ್, ಸ್ಯಾನಿಟೈಸರ್‌ಗಳನ್ನು ವಿತರಿಸಲಾಯಿತು. ಸುಮಾರು ಒಂದು ಸಾವಿರ ಸಸಿಗಳನ್ನು ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನೆಡಲಾಯಿತು.

ದಯಾನಂದ್ ಸಾಗರ್ ವಿವಿಯಲ್ಲಿ ಆನ್‌ಲೈನ್ ಪ್ರವೇಶ ಆರಂಭ

▪ **ವಿಕ ಸುದ್ದಿಲೋಕ** ಬೆಂಗಳೂರು

ನಗರದ ಪ್ರತಿಷ್ಠಿತ ದಯಾನಂದ್ ಸಾಗರ್ ವಿಶ್ವವಿದ್ಯಾಲಯ ಹಲವು ಕೋರ್ಸ್‌ಗಳಿಗೆ ಆನ್‌ಲೈನ್ ಮೂಲಕ ಪ್ರವೇಶ ಕಲ್ಪಿಸುತ್ತಿದೆ.

ಡಿಎಸ್‌ಇಸಿ, ಡಿಎಸ್‌ಎಟಿಎಂ, ಡಿಎಸ್ ಸಿಎಸ್‌ಸಿ, ಡಿಎಸ್‌ಐಟಿ, ಡಿಎಸ್ ಬಿಎ, ಪಿಯುಸಿ ಮತ್ತು ಪಿಜಿಡಿಎಂ ಸೇರಿ ಹಲವು ಕೋರ್ಸ್‌ಗಳಿಗೆ ಆನ್‌ಲೈನ್ ಪ್ರವೇಶ ಪ್ರಕ್ರಿಯೆ ಆರಂಭಿಸಲಾಗಿದೆ.

ಲಭ್ಯವಿರುವ ಅಂತರ್ಜಾಲ ತಂತ್ರಜ್ಞಾನ ಬಳಸಿಕೊಂಡು ವಾಟ್ಸ್ಯಾಪ್ ಮೂಲಕವೇ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಬಹುದು. ಹಾಗಾಗಿ, ಪೋಷಕರು ಹಾಗೂ ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಭೌತಿಕವಾಗಿ ವಿ.ವಿ. ಕ್ಯಾಂಪಸ್‌ಗೆ ಬರುವ ಅಗತ್ಯವಿಲ್ಲ.

ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕವೇ ಕೌನ್ಸೆಲಿಂಗ್ ನಡೆಸಲಾಗುವುದು ಮತ್ತು ಅವರು ವರ್ಚ್ಯುಯಲ್ ಟೂರ್ ಮೂಲಕ ಕ್ಯಾಂಪಸ್‌ನಲ್ಲಿ ಲಭ್ಯವಿರುವ ಮೂಲಸೌಕರ್ಯಗಳನ್ನು ವೀಕ್ಷಿಸಿ ಅದರ ಅನುಭವ ಪಡೆಯಬಹುದು.

ವಿ.ವಿ. ವಿದ್ಯಾರ್ಥಿಗಳಿಗೆ ಸುರಕ್ಷತೆಗೆ ಒತ್ತು ನೀಡಲಿದೆ. ಪ್ರವೇಶ ಮುಗಿದ ನಂತರ ಸರಕಾರದ ನಿಯಮಗಳು ಹೊರಬರುವವರೆಗೆ ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಲಾಗುವುದು. ಹೆಚ್ಚಿನ ವಿವರಗಳಿಗೆ www.dayanan-dasagar.edu. ಭೇಟಿ ನೀಡಬಹುದು.

ವಿವಿ ಕಚೇರಿ ದೂರವಾಣಿ ಸಂಖ್ಯೆ: 080-42161750

ಚಿಕ್ಕಪೇಟೆ ಸೀಲ್‌ಡೌನ್ ತೆರವಿಗೆ ಒತ್ತಾಯ

▪ **ವಿಕ ಸುದ್ದಿಲೋಕ** ಬೆಂಗಳೂರು

ನಗರದ ಕೆ.ಆರ್.ಮಾರುಕಟ್ಟೆ, ಎಸ್.ಪಿ ರಸ್ತೆ, ಚಿಕ್ಕಪೇಟೆ ಹಾಗೂ ಸುತ್ತಮುತ್ತಲ ಪ್ರದೇಶದ ಸೀಲ್‌ಡೌನ್ ಆದೇಶ ಹಿಂಪಡೆಯುವಂತೆ ಎಫ್‌ಕೆಸಿಸಿಐ ಅಧ್ಯಕ್ಷ ಸಿ.ಆರ್.ಜನಾರ್ಧನ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಒತ್ತಾಯಿಸಿದ್ದಾರೆ.

''ಜೂನ್ 24ರಿಂದ ಕೆ.ಆರ್. ಮಾರುಕಟ್ಟೆ, ಕಲಾಸಿಪಾಳ್ಯ, ಎಸ್.ಪಿ ರಸ್ತೆ, ಚಿಕ್ಕಪೇಟೆ, ಅವೆನ್ಯೂ ರಸ್ತೆ, ಬಿ.ವಿ.ಕೆ. ಅಯ್ಯಂಗಾರ್ ರಸ್ತೆ, ಮಾಮೂಲ್ ಪೇಟೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವ್ಯಾಪಾರಿ ಚಟುವಟಿಕೆಗಳನ್ನು ಸೀಲ್‌ಡೌನ್ ಮಾಡುವ ಮೂಲಕ ಸ್ತಬ್ಧಗೊಳಿಸಲಾಗಿದೆ. ಆದರೆ, ಶ್ರಾವಣ ಮಾಸ ಪ್ರಾರಂಭವಾಗಿದ್ದು, ರಾಜ್ಯದ ಪರಂಪರೆ ಬಿಂಬಿಸುವಂತಹ ದೊಡ್ಡ ದೊಡ್ಡ ಹಬ್ಬಗಳು ಸಾಲುಸಾಲಾಗಿ ಬರುತ್ತಿದ್ದು, ಸಾರ್ವಜನಿಕರಿಗೆ ಸೀಲ್‌ಡೌನ್ ಮುಂದುವರಿಕೆಯಿಂದ ಅನಾನುಕೂಲವಾಗಿದೆ. ಇದರಿಂದ ಸರಕಾರದ ಆದಾಯಕ್ಕೂ ಹೊಡೆತ ಬಿದ್ದಿದೆ,'' ಎಂದಿದ್ದಾರೆ.

ತಿಂಗಳಿಂದ ವಹಿವಾಟು ಇಲ್ಲದೆ ನಷ್ಟ

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ನಾನಾ ವಾರ್ಡ್‌ಗಳಲ್ಲಿ ವ್ಯಾಪಾರಿಗಳಿಗೆ ಶಾಸಕ ಮಂಜುನಾಥ್ ಮಾಸ್ಕ್, ಸ್ಯಾನಿಟೈಸರ್ ವಿತರಿಸಿದರು.

ಮಾದಾವರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಗೋವಿಂದಪ್ಪ ಅವರು ಸೆಕ್ಯೂರಿಟಿ ಗಾರ್ಡ್‌ಗಳಿಗೆ ಆಹಾರ ಕಿಟ್ ವಿತರಿಸಿದರು.